

ನುಡಿಯಲ್ಲೆ ಬಣ್ಣಿಸುವ ಪನ್ನತಿಕೆ ಬರುವನಕ ನನ್ನ ಬಾಳಿದು ನರಕ' – ಎಂಬಲ್ಲಿಂದ ಕನ್ನಡ ನುಡಿ ಮುಂದಕ್ಕೆ ಬಂದುಬಿಟ್ಟಿದೆ. ಈ ಎಲ್ಲ ಮಾತುಗಳ ಮೇಲಿನಿಂದ ನನ್ನ ಭಾಷೆಯ ರೀತಿ ನಿಮಗೆ ತಿಳಿದುಬರಬಹುದು ಎಂದು ವಿನಮ್ರನಾಗಿ ಅಂದುಕೊಳ್ಳುತ್ತೇನೆ.

◆ **ಅಧ್ಯಾತ್ಮಕ್ಕೆ ನೀವು ತೆರೆದುಕೊಂಡದ್ದು?**

ಪೂರ್ತಿಯಾಗಿ ತೆರೆದುಕೊಂಡದ್ದು ಪುತ್ತೂರು ಅಜ್ಜನವರ ಒಡನಾಟದಿಂದ.

◆ **ಸೂಫಿ ಬ್ಯಾರಿಯವರ ಒಡನಾಟ ನಿಮ್ಮ ವ್ಯಕ್ತಿತ್ವದ ಯಾವ ಅಂಶವನ್ನು ಬೆಳಗಿದೆ?**

ಸೂಫಿ ಬ್ಯಾರಿಯವರಿಗೆ ಸಸ್ಯಗಳೆಂದರೆ ಜೀವಂತ ವ್ಯಕ್ತಿಗಳಿದ್ದ ಹಾಗೆ. ಗಿಡಗಳನ್ನು ನೋಡಿದ ಕೂಡಲೇ ಇದಕ್ಕೇನು ತೊಂದರೆಯಾಗಿದೆ, ಇದಕ್ಕೇನು ಬೇಕೆನ್ನುವುದು ಅವರಿಗೆ ತಿಳಿಯುತ್ತಿತ್ತು. 'ಒಂದು ಗಿಡ, ಚೆನ್ನಾಗಿ ಬೆಳೆಯುವುದಕ್ಕೆ ನಿಮ್ಮ ಯಾರ ನೆರವೂ ಅದಕ್ಕೆ ಬೇಕಾಗಿಲ್ಲ, ಬೆಳೆಯುವ ಸಾಮರ್ಥ್ಯ ಅದರಲ್ಲೇ ಇದೆ ಎಂದು ನಂಬುವುದಕ್ಕೆ ನಿಮಗೇನು ಸಂಕಟ' ಎಂದು ನಮ್ಮನ್ನು ಗದರಿಸುತ್ತಿದ್ದರು. ಅವರ ಈ ಒಳನೋಟ ಎಂಥ ಉದಾತ್ತವಾದುದು!

◆ **ನಿಮ್ಮ ಸಾಹಿತ್ಯ – ಮುಖ್ಯವಾಗಿ 'ಆನಂದ ಲಹರಿ'; ಸೃಷ್ಟ್ಯಾತ್ಮಕತೆಯ ಉಪಾಸನೆಯೆಂಬಂತೆ ಭಾಸವಾಗುತ್ತದೆ. ಈ ಬಗ್ಗೆ ಕೇಳಬಹುದೆ?**

'ಆನಂದಲಹರಿ'ಯಲ್ಲೇ ಈ ಕುರಿತು ವಿವರಣೆಗಳಿವೆಯಲ್ಲವೆ? ಅದಿರಲಿ. ನಾನು ಕಂಡುಕೊಂಡದ್ದೇನೆಂದರೆ – ವಿಚಾರದ ಮಧ್ಯವರ್ತಿತ್ವವನ್ನು ದಾಟದೆ ನಮಗೆ ಜೀವನದ ನೇರ ಸಂಪರ್ಕವಾಗುವುದಿಲ್ಲ. ಅಂದರೆ, ನಮಗೆ ನಾವೇ ಅಡ್ಡಿ. ವಿಚಾರವನ್ನು ದಾಟಬೇಕೆನ್ನುವುದೂ ಒಂದು ವಿಚಾರವೇ ಆಗಿರುವುದರಿಂದ ಈ ಜಾಲದಲ್ಲಿ ಸಿಕ್ಕಿ ಬೀಳದೆ ವಿಚಾರವನ್ನೇ ಉಪಾಸನೆಯಾಗಿಸುವುದು ನನ್ನ ದಾರಿ. ವಿಚಾರಕ್ಕೆ ಬರಿಯ ವಿಚಾರದ ಸ್ವರೂಪವೇ ಕಳಚಿ ಹೋಗಿ, ವಿಚಾರವು ನಾಡಿಯ ಮಿಡಿತದಂತೆ ಬದುಕಿನ ಭಾಗವೇ ಆಗುವುದು. 'ಸೃಷ್ಟಿಶೀಲತೆ' ಎಂದರೆ ಯಾವುದರದ್ದೇ ಜಡರೂಪವು ಕಳಚಿ ಅದರೊಳಗಿನ ಚೈತನ್ಯಾಂಶವು ಪ್ರಕಟವಾಗುವುದು. 'ಆನಂದ ಲಹರಿ'ಯಲ್ಲಿ ನಾನು ಮಾಡಬೇಕೆಂದು ಹೊರಟದ್ದು ಅದನ್ನು. ಅಷ್ಟೇ.

◆ **ಭಾರತೀಯ ಸಾಹಿತ್ಯ 'ಮನಸ್ಸನ್ನು' ಕಂಡಿರುವ ಬಗೆ?**

ಮನಸ್ಸೇ ಮನಸ್ಸನ್ನು ಕಂಡ ಬಗೆ – ಅಲ್ಲವೆ? ತನ್ನನ್ನೇ ತಾನು ಕಾಣುವುದೆಂದರೆ ಅದೊಂದು ಬಗೆಯ ಪ್ರತಿಫಲನವಲ್ಲವೆ? ಮನಸ್ಸು ಎಲ್ಲವನ್ನೂ ಪ್ರತಿಫಲನ ಮಾಡುವ ಇಂದ್ರಿಯವಾದುದರಿಂದ ಮನಸ್ಸನ್ನು 'ಚಂದ್ರ'ನೆಂದು ಕರೆದರು. ಕಡಲಿನಲ್ಲಿ ಹುಟ್ಟಿತಂತೆ